ಕಾಡ್ಗಿಚ್ಚು ಸ್ಪರ್ಶಿಸಿಹೋದ ಬಯಲಿನಲ್ಲಿ ಬೆಂದುಹೋಗಿರುವ ಕಾಂಗರೂ



## ಮನುಕುಲಕ್ಕೆ ಎಚ್ಚರಿಕೆಯ ಮತ್ತೊಂದು ಅಲಾರಾಂ



ಮಳಿಗೆಯಲ್ಲಿದ್ದ ಮರದ ದಿಮ್ಮಿಗಳು ಕೆಂಡ ಕಾರುತ್ತಿದ್ದು, ಈ ಲೇಖನ ಬರೆಯುವ ವೇಳೆಗೆ ಅಗ್ನಿಶಾಮಕ ದಳದವರಿಗೆ ಅದರ ಬಳಿಗೂ ಹೋಗಲಾಗಿರಲಿಲ್ಲ.

ದಕ್ಷಿಣ ಆಸ್ಟ್ರೇಲಿಯಾದ ಬಳಿ ಕಾಂಗರೂ ಐಲ್ಯಾಂಡ್ (ಕಾಂಗರೂ ದ್ವೀಪ) ಎಂಬ ಪ್ರೇಕ್ಷಣೀಯ ಸ್ಥಳ. ಅಲ್ಲಿಗೆ ಪ್ರತಿವರ್ಷ ನೂರಾರು ಜನ ವಿಹಾರಕ್ಕಾಗಿ ಬರುತ್ತಿದ್ದರು. ಕಾಂಗರೂ, ಪೆಂಗ್ವಿನ್ ಮುಂತಾದವಕ್ಕೆ ಹೆಸರಾದ ಪ್ರದೇಶ ಇದು. ಇಂದು ಆ ದ್ವೀಪದ ಬಹುಭಾಗದಲ್ಲಿ ಬೂದಿಯ ಬದಲು ಇರುವುದು ಭಗ್ನಾವಶೇಷ ಮಾತ್ರ. 1 ಲಕ್ಷ 60 ಸಾವಿರ ಹೆಕ್ಟೇರುಗಳು ಆಹುತಿಯಾಗಿ 60 ಮನೆಗಳು ಭಸ್ಮವಾಗಿವೆ. ನ್ಯೂ ಸೌಥ್ ವೇಲ್ಸ್ ಪ್ರಾಂತದಲ್ಲಿಯೇ ಈಗ 160 ಕಡೆ ಬೆಂಕಿ ಉರಿಯುತ್ತಿದೆ. ಕೂಮಾ, ಬೇಟ್ಮನ್ಸ್ ಬೇ, ಮಿರುಂಡಾ ಮುಂತಾದ ಅನೇಕ ಊರುಗಳಲ್ಲಿ ತಾಂಡವವಾಡಿದೆ ಈ ಅಗ್ನಿ. ಆಸ್ಟ್ರೇಲಿಯಾದಲ್ಲಿ ಒಟ್ಟು 28 ಜನ ಮೃತರಾದರೆ, 2200 ಮನೆಗಳು ನಾಶವಾಗಿವೆ.

ಒಂದೆಡೆ ಟ್ರೈನಿನ ಹಳಿ ಅಂಕುಡೊಂಕಾಗಿದೆ. ನಮಗೆ ವಿದ್ಯುತ್ ಸರಬರಾಜು ಮಾಡುತ್ತಿದ್ದ ಸ್ನೋಯೀ ಮೌಂಟೆನ್ ಘಟಕಕ್ಕೆ ಸಾಕಷ್ಟು ಹಾನಿಯಾಗಿ ನಮಗೆ 1000 ಮೆಗಾವ್ಯಾಟ್ ವಿದ್ಯುತ್ ಖೋತಾ ಆಗಿದೆ. ಪಟ್ಟಿಮಾಡುತ್ತಾ ಹೋದರೆ ಕೊನೆ ಇಲ್ಲ!

ಪ್ರಾಣಿಗಳ ಗತಿ? ವಿಧಿಯಿಲ್ಲದೆ ಕೆಲವರು ತಾವು ಸಾಕಿದ್ದ ದನಗಳನ್ನು ಗುಂಡಿಟ್ಟು ಸಾಯಿಸಿದ್ದಾರೆ ಎಂಬುದನ್ನು ಊಹಿಸುವುದೂ ಕಷ್ಟ. ಬೆಂಕಿ